ಲವಲವಿಕೆಯಲ್ಲಿರುತ್ತಿದ್ದರು. ಅವರ ಕಂಪನಿಯಲ್ಲಿ ಪ್ರತಿ ತಿನಿಸುಗಳು ರುಚಿಯಾಗಿರುತ್ತಿದ್ದವು ವಾಮನನಿಗೆ. ಯಾವುದೋ ಬಗೆ ಬಗೆಯ ಮೀನುಗಳನ್ನು ಅವರು ತಿನ್ನಲು ತರಿಸಿಕೊಳ್ಳುತ್ತಿದ್ದರು. ವಾಮನನ ಬಳಿ ಅವರು ಹೇಳಿದ ಜೋಕ್‌ಗಳಿಗೆ ಲೆಕ್ಕವಿಲ್ಲ. ವರ್ಣಮಯವಾಗಿದ್ದ ಕಾಲೇಜಿನ ದಿನಗಳ ಗೆಳತಿಯರ ಬಗೆಗೆ ತಿಳಿಸುತ್ತಿದ್ದರು.

ತಾರುಣ್ಯದಲ್ಲಿನ ಪ್ರೀತಿ ಪ್ರೇಮಗಳ ನೆನಪು ಬಿಚ್ಚಿಡುತ್ತಿದ್ದರು. ಕ್ಲಬ್‌ಗೆ ಬರುತ್ತಿದ್ದವರೆಲ್ಲರೂ, ''ನಮಸ್ತೇ ರಾವ್, ಹಲೋ ಸರ್, ಪ್ರಣಾಮ್ ಜೀ'' ಇತ್ಯಾದಿಯಾಗಿ ಹೇಳುತ್ತ ದುಷ್ಯಂತರಾವ್ ಅವರನ್ನು ಮಾತನಾಡಿಸಿಯೇ ಹೋಗುತ್ತಿದ್ದರು. ಇವನ ಕತೆ ಇದು, ಅವನ ಕತೆ ಹೀಗೆ ಎಂದು ಬೆನ್ನ ಹಿಂದೆ ಯಾರ ಬಗೆಗೂ ರಾವ್ ಹೇಳಿದ್ದಿಲ್ಲ. ಒಟ್ಟಿನಲ್ಲಿ ವಾಮನನ ಕಂಪನಿ ಬೇಕಿತ್ತು ಅವರಿಗೆ. ಅನಂತರ ಅಲ್ಲೇ ಸನಿಹದಲ್ಲಿನ ರೂಬಿ ಪಾರ್ಕ್ ಗಾರ್ಡನ್ಸ್‌ಗೆ ಅವರನ್ನು ತನ್ನ ಕಾರಿನಲ್ಲಿ ವಾಮನ ಬಿಡುತ್ತಿದ್ದ. ತನ್ನ ಕುಟುಂಬದ ಬಗೆಗೆ ಹೀಗೆ, ಹಾಗೆ ಎಂದು ರಾವ್ ವಾಮನನ ಬಳಿ ಯಾವಾಗಲೂ ಹೇಳಿರಲಿಲ್ಲ. ''ಓಡುವ ದಿನಗಳು ಅಪಾಯಕ್ಕೆ ತಲುಪಿಸುತ್ತವೆ ಮಿಸ್ಟರ್ ವಾಮನ್. ಹಾಗೆಂದು ನಾವದನ್ನು ನಿಲ್ಲಿಸಲೂ ಆಗದು'' ಎಂದು ವಿಸ್ಕಿಯ ಡ್ರಾಪ್ಸ್ ತುಳುಕಿಬಿಡಬಹುದಿತ್ತೋ ಏನೋ ಎಂಬಷ್ಟು ವೇಗದಿಂದ ಕುಡಿದು ಗ್ಲಾಸ್‌ನ ತಳವನ್ನು ಟೇಬಲ್ಲಿಗೆ ಕುಕ್ಕಿದ್ದರು ಒಂದು ದಿನ. ವಾಮನ ವಿಸ್ಕಿ ಚೆಲ್ಲಿರಬಹುದು ಎಂದೇ ಎಣಿಸಿದ್ದ. ''ನೋ, ಡೋಂಟ್‌ವರಿ'' ಎಂದು ಅವರೇ ನಕ್ಕು ಹೇಳಿದ್ದರು. ಕುಡಿಯುತ್ತಿರುವಾಗ ಸಿಗರೇಟುಗಳು ನಾಲ್ಕೈದಾದರೂ ಬೇಕೇಬೇಕಿತ್ತು ಅವರಿಗೆ.

★★★

ಹೀಗೆ ದಿನಗಳು ಕಳೆಯುತ್ತಿರುವಾಗ ವಾಮನ ನಿಧಾನವಾಗಿ ಅಣ್ಣ ಜಗದೀಶನ ಸಹಪಾಠಿ ಎಸ್.ಡಿ. ಟಾಕ್ಲೆ, ಸಂಗೀತ ರತ್ನ ಪಂಡಿತ್ ದುರ್ಗಾದಾಸ್ ಅವತಾರ ಕೃಷ್ಣ ಮಹಾರಾಜ್, ದುಷ್ಯಂತರಾವ್ ಮುಂತಾಗಿ ನೆನಪಿಸಿಕೊಳ್ಳುತ್ತ, ಕಾಲಕ್ಕೆ ಸಂದು ಹೋದ ಅಪ್ಪ, ಅಮ್ಮರನ್ನು ನೆನೆಯುತ್ತ, ಟೋಕಿಯೊದಲ್ಲಿ ಇರುವ ಅಣ್ಣ ಜಗದೀಶನ ಬಗೆಗೆ ಯೋಚಿಸುತ್ತ ಖಿನ್ನನಾಗುತ್ತಲೇ ಇದ್ದ. ಚಿತೆಯಲ್ಲಿ ಬೇಯುವ ದೇಹಗಳ ವಿಚಾರ ವಾಮನನಿಗೆ ನಡುಕವನ್ನೇ ತರುತ್ತ ಹೋಯ್ತು. ಖಿನ್ನತೆಯು ಚಿತೆಯ ದುರ್ಬಲ ಸ್ವರೂಪವೋ, ಪ್ರಬಲ ಸ್ವರೂಪವೋ ಎಂಬುದು ಮನಸ್ಸಿನಲ್ಲಿ ಹೊಯ್ದಾಡತೊಡಗಿತ್ತು. ಇದೇ ಅಗ್ನಿಯನ್ನು ಹವಿಸ್ಸು ಅರ್ಪಿಸುತ್ತ ಬೇಡುವ ಪ್ರಾರ್ಥನೆಯ ವಿಚಾರ ನೆನಪಿಗೆ ಬರುತ್ತಿತ್ತು. ''ಸ್ವಸ್ತಿ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ಸಿದ್ಧಿಂ ಬುದ್ಧಿಂ ಶ್ರಿಯಂ ಬಲಂ, ಆಯುಷ್ಯಂ ತೇಜಮಾರೋಗ್ಯಂ ದೇಹಿಮೇ ಹವ್ಯವಾಹನ'' ಎಂದು ಮೊರೆಯಿಡುವ ಬಗೆ ನೆನಪಾಗಿ, ಬದುಕನ್ನು ಸಕಲ ಸಮೃದ್ಧಿಗೂ ಪಕ್ವತೆಯಿಂದ ಅರಳಿಸುವ ಹವ್ಯವಾಹನನೇ, ಅಂತ್ಯಕ್ಕೆ ಚಿತೆಯ ಉರಿಯಲ್ಲಿ ಬೇಯಿಸುವ ರೂಪಾಂತರ ಮನಸ್ಸನ್ನು ಅಸ್ತವ್ಯಸ್ತಗೊಳಿಸಿತು ವಾಮನನಲ್ಲಿ. ಊರಲ್ಲಿನ ಆಸ್ತಿ, ದುಡಿದದ್ದು, ಆನಂದಿಸಿದ್ದು, ನಕ್ಕಿದ್ದು, ಹರಟಿದ್ದು ಇತ್ಯಾದಿ ಎಲ್ಲಾ ಕೇವಲ ಉರಿಯುತ್ತ ಹೋಗಿವೆ ಎಂದು ಕಂಗಾಲಾದ. ಆಗುತ್ತಾ ಹೋಗಿದ್ದ.

ಎಲ್ಲೆಲ್ಲೂ ಅಗ್ನಿಪುರುಷನ ವಿರಾಟ ಸ್ವರೂಪದ ದಾರುಣತೆಗೆ ಬೆದರಿದ್ದ. ದಿನಗಳು ಉರುಳುವ ಬಗೆ ಉರಿ ಎಬ್ಬಿಸಿತ್ತು. ಉರುಳಿ ಹೋದವರ ಯಾದಿಯನ್ನು ರೂಪಿಸುವುದು ನನ್ನ ಕೆಲಸವಾಗುತ್ತಿದೆಯೋ ಎಂದು ನಡುಗಿದ್ದ. ಎರಡು ವಾರಗಳ ಹಿಂದೆ ಊರಿಂದ ಬಂದ ಫೋನಿನಲ್ಲಿ ಪಕ್ಕದ ಬೀದಿಯ ಅಚ್ಯುತ ಕಿಣಿ, ಮಹಾ ದೊಡ್ಡ ಬರಡಿಸಿಲು ಬಡಿದ, ಅನುಭವ ತಂದ ಸುದ್ದಿ ಬಿತ್ತರಿಸಿದ್ದ. ವಾಮನ ದಂಗಾಗಿದ್ದ ಈ ಸುದ್ದಿಗೆ. ಅಣ್ಣ ಜಗದೀಶನ ಸಹಪಾಠಿ ಎಸ್.ಡಿ. ಟಾಕ್ಲೆ ತೀರಿಕೊಂಡ ವಿಷಯವಾಗಿತ್ತು ಅದು. ಅನಂತರ ಐದು ದಿನಗಳ ಹಿಂದೆ ಜೀರ್ಣಿಸಿಕೊಳ್ಳಲು ಸಾಧ್ಯವಾಗದ ಮತ್ತೊಂದು ಸುದ್ದಿ. ಪಂಡಿತ್ ದುರ್ಗಾದಾಸ್ ಮಹಾರಾಜರ ಮಗ ಧರ್ಮದೀಪ್ ತೀರಿಕೊಂಡ ವಿಷಯದ ದಾರುಣತೆ ಕಿವಿಗೆ